**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

ಸಿ.ಸಿ.ನಂ.686/2014.
ಪಿ.ಡಬ್ಲ್ಯೂ: 1, ಸಿ.ಡಬ್ಲ್ಯೂ: 1.

**ದಿನಾಂಕಃ 22-09-2016 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ಆರೋಪಿತನನ್ನು ಹೊರದೂಡುವ ಆದೇಶದ ದೃಢೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿಗೆ ಸಾಕ್ಷಿ ಭೂ-ಕಂದಾಯ ಅಧಿನಿಯಮ 64 ರ ಅಡಿಯಲ್ಲಿ ನೋಟೀಸನ್ನು ನೀಡಿದ್ದು ಸದರಿ ನೋಟೀಸಿನ ದೃಢೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1ನೇ ಆರೋಪಿ ಪರಃ ಶ್ರೀ. ಕೆ.ಎಲ್.ಆರ್. ವಕೀಲರಿಂದ.**

ನಿ.ಪಿ-1 ರ ನೋಟೀಸನ್ನು ನಾನೇ ನೀಡಿರುತ್ತೇನೆ ಎಂದರೆ ಸರಿ. ನಿ.ಪಿ-1 ರಲ್ಲಿ ನಮೂದಿಸಿರುವ ಅಂಶಗಳು ಸರಿಯಾಗಿರುತ್ತವೆ. ನಿ.ಪಿ-1 ರಲ್ಲಿ ನಮೂದಿಸಿರುವಂತೆ ಸರ್ವೇ ನಂ.7/ಪಿ2 ಇಲ್ಲ ಎಂದರೆ ಸರಿಯಲ್ಲ, ಈ ದೂರನ್ನು ರಾಜಕೀಯ ಕುಮ್ಮಕ್ಕಿನ ಮೇಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ-2 ರಲ್ಲಿ ಎರಡು ಕಡೆಯಲ್ಲಿ ದಿನಾಂಕವನ್ನು ತಿದ್ದಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ತಿದ್ದುಪಡಿಯ ದಿನಾಂಕದಲ್ಲಿ ಬೇರೆ ದಿನಾಂಕ ಇರುತ್ತದೆ ಎಂದರೆ ಸರಿ. ನಿ.ಪಿ-2 ರನ್ನು ನೀಡುವ ಮೊದಲು ನೋಟೀಸನ್ನು ಜಾರಿಗೊಳಿಸಿದ್ದೆವು. ಸದರಿ ನೋಟೀಸ್ ಕೂಡ ಇದೇ ಸ್ವತ್ತಿಗೆ ಸಂಬಂಧಿಸಿರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದ ಸ್ವತ್ತು ಒತ್ತುವರಿಯಾಗಿದೆ ಎಂದು ಚೆನ್ನಪ್ಪ ಎಂಬ ಸಾರ್ವಜನಿಕರು ದೂರನ್ನು ನೀಡಿದ್ದರು. ಸದರಿ ದಾಖಲೆಯನ್ನು ನಾನು ಪೋಲೀಸರಿಗೆ ನೀಡಿರುತ್ತೇನೆ. ನಾನು ಖುದ್ದಾಗಿ ಯಾವುದೇ ಸ್ಥಳ ಪರಿಶೀಲನೆಯನ್ನು ಮಾಡಿಲ್ಲ, ಮೊದಲು 1ನೇ ಆರೋಪಿಗೆ ನೋಟೀಸನ್ನು ಜಾರಿಗೊಳಿಸಿ ನಂತರ ಭೂ-ಮಾಪಕರಿಗೆ ನೋಟೀಸನ್ನು ಜಾರಿಗೊಳಿಸಿರುತ್ತೇವೆ. ಸಾಕ್ಷಿಗೆ ತನಿಖಾಧಿಕಾರಿಗಳು ತಯಾರಿಸಿರುವ ನಕಾಶೆಯನ್ನು ತೋರಿಸಿದ್ದು ಅದರಲ್ಲಿ ತೋರಿಸಿರುವಂತ ಸ್ವತ್ತು ಈ ಪ್ರಕರಣಕ್ಕೆ ಸಂಬಂಧಿಸಿದೆಯಾ ಎಂದು ಕೇಳಲಾಗಿ ಸಾಕ್ಷಿಯು ಇರಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿಯು ಒಪ್ಪಿಕೊಂಡ ಸದರಿ ನಕಾಶೆಯನ್ನು ನಿ.ಡಿ-1 ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿ.ಡಿ-1 ನ್ನು ಮತ್ತು ಅಭಿಯೋಜನೆ ಪರವಾಗಿ ಹಾರುಪಡಿಸಿರುವ ಮತ್ತೊಂದು ನಕಾಶೆಯನ್ನು ತೋರಿಸಿ ಎರಡಲ್ಲಿನ ಸ್ಥಳವು ಒಂದೇ ಎಂದು ಕೇಳಲಾಗಿ ಸಾಕ್ಷಿಯು ನಾನು ಆ ಕುರಿತು ಹೇಳಲು ಬರುವುದಿಲ್ಲವೆಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿಗೆ ತೋರಿಸಿದ ಮತ್ತೊಂದು ನಕಾಶೆ ಯಾವುದು ಎಂದು ಗುರುತಿಸುವ ಮಟ್ಟಿಗೆ ಸದರಿ ನಾಕಶೆಯನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸದರಿ ನಿ.ಡಿ-2 ರಲ್ಲಿ ಒತ್ತುವರಿಯಾಗಿರುವ ಜಾಗ ಸರ್ವೇ ನಂ.23 ಎಂದು ನಮೂದಿಸಿರುತ್ತದೆ ಎಂದರೆ ಸರಿ.

ಯಾವುದೇ ಸರ್ವೇ ನಂಬರ್‌ನಲ್ಲಿ ಪಿ ಎಂದು ನಮೂದಿಸಿಲ್ಲವಾದರೆ ಅದು ಸ್ವತಂತ್ರ ಪಹಣಿಯನ್ನು ಹೊಂದಿರುತ್ತದೆ ಎಂದರೆ ಸರಿ. ಆ ಗ್ರಾಮಕ್ಕೆ ಸೇರಿದ ಸರ್ವೇ ನಂ.23 ಕ್ಕೆ ಪಹಣಿ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.7 ರಿಂದ ಹೊಸ ಸರ್ವೇ ನಂಬರ್ ಆಗಬೇಕಾದರೆ ಹಸ್ತಾಂತರವಾಗಿ ನೋಂದಣಿಯಾಗಿ ದಾಖಲೆಯಾದರೆ ಮಾತ್ರ ಆ ರೀತಿ ಹೊಸ ಸರ್ವೇ ನಂಬರ್ ಆಗುತ್ತದೆ ಎಂದರೆ ಸರಿ. ಒಂದೊಮ್ಮೆ ಆ ಸರ್ವೇ ನಂಬರ್‌ನಲ್ಲಿ ವಂಶಪಾರಂಪರ್ಯವಾಗಿ ದುರಸ್ಥಿಯಾದರೆ ಹೊಸ ಸರ್ವೇ ನಂಬರ್ ಬರುತ್ತದೆ ಎಂದರೆ ಸರಿ. ಸದರಿ ಸರ್ವೇ ನಂ.23 ಕ್ಕೆ ನೋಂದಣಿಯಾದ ದಾಖಲೆಯಾಲೀ ಅಥವಾ

ವಂಶಪಾರಂಪರ್ಯವಾದ ದುರಸ್ಥಿಯಾಗಲೀ ಆಗಿರುವುದಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ.

ಸರ್ವೇ ನಂ.23 ಎಂದು ತೋರಿಸಲು ದುರಸ್ಥಿಯಾಗಿ ಮ್ಯುಟೇಷನ್ ದಾಖಲೆಯಾಗಿರಬೇಕು ಎಂದರೆ ಸರಿ. ಸರ್ವೇ ನಂ.23 ಕ್ಕೆ ಸಂಬಂಧಿಸಿದಂತೆ ಯಾವುದೇ ಮ್ಯುಟೇಷನ್ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಆ ಕುರಿತು ನನಗೆ ಮಾಹಿತಿ ಇಲ್ಲ ಏಕೆಂದರೆ ಆ ದಾಖಲೆಗಳನ್ನು ನಾನು ನೋಡಿರುವುದಿಲ್ಲವೆಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೇ ನಂ.23 ರ ಸ್ವತ್ತನ್ನು ಖುಲ್ಲಾಪಡಿಸುವ ಪೂರ್ವದಲ್ಲಿ ಸದರಿ ಸರ್ವೇ ನಂ.23 ಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ ಎಂದರೆ ಸರಿ. ನಿ.ಪಿ-2 ರಂತೆ 1ನೇ ಆರೋಪಿಗೆ ನೀಡಿರುವ ನೋಟೀಸಿನಂತೆ ಸರ್ವೇ ನಂ.7/ಪಿ2 ಬಾವೀಕೆರೆ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

1ನೇ ಆರೋಪಿಯು ಯಾವುದೇ ತಪ್ಪನ್ನು ಎಸಗದಿದ್ದರೂ ಸಹ 1ನೇ ಆರೋಪಿ ಹಾಗೂ ಆತನ ತಂದೆಯ ತೇಜೋವಧೆ ಮಾಡಲು ನಿ.ಪಿ-1 ರಂತೆ ನಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟೀಸ್ ನೀಡಿರುವಂತೆ 1ನೇ ಆರೋಪಿಯು ಯಾವುದೇ ತಪ್ಪನ್ನು ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ಸಲ್ಲಿಸುವ ಪೂರ್ವದಲ್ಲಿ ಹಾಗೂ ನಂತರದಲ್ಲಿ ಯಾವುಂದೇ ದಾಖಲಾತಿಯನ್ನು ಪರಿಶೀಲಿಸದೆ ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪ್ರಾರಂಭದಲ್ಲಿ ಕೊಟ್ಟ ನೋಟೀಸಿಗೂ ಹಾಗೂ ನಂತರ ಕೊಟ್ಟ ನೋಟೀಸಿಗೂ ಒಂದಕ್ಕೊಂದು ತಾಳೆಯಾಗುವುದಿಲ್ಲ ಎಂದರೆ ಸಾಕ್ಷಿಯು ಪ್ರಾರಂಭದಲ್ಲಿ ನಮಗೆ ಸ್ವತ್ತಿನ ಕುರಿತು ನಿಖರ ಮಾಹಿತಿ ಇರುವುದಿಲ್ಲ ನಂತರ ಭೂ-ಮಾಪಕರು ವರದಿಯನ್ನು ಸಲ್ಲಿಸಿದ ಮೇಲೆ ಮಾಹಿತಿ ತಿಳಿದು ಬಂದಿರುತ್ತದೆ ಆ ಕಾರಣದಿಂದ ವ್ಯತ್ಯಾಸವಿರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಖಚಿತವಾದ ಮಾಹಿತಿಯನ್ನು

ಪಡೆದುಕೊಂಡು ನೋಟೀಸನ್ನು ನೀಡಲು ನನಗೆ ಅವಕಾಶವಿತ್ತು ಎಂದರೆ ಸರಿ. ಸುಳ್ಳು ದೂರನ್ನು ಸಲ್ಲಿಸುವ ಕಾರಣದಿಂದಾಗಿ ಯಾವುದೇ ಪ್ರಯತ್ನವನ್ನು ಖಚಿತವಾದ ಮಾಹಿತಿಯನ್ನು ಪಡೆಯಲು ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2ನೇ ಆರೋಪಿ ಪರಃ ಶ್ರೀ. ಕೆ.ಸಿ. ವಕೀಲರಿಂದ.**

1ನೇ ಆರೋಪಿ ಅತಿಕ್ರಮಣ ಮಾಡಿದ್ದಾರೆಂಬ ವಿಷಯ ಚೆನ್ನಪ್ಪ ಎಂಬುವವರು ದೂರನ್ನು ನೀಡಿದ ನಂತರ ಗೊತ್ತಾಗಿರುತ್ತದೆ ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಈ ಕುರಿತು ನನಗೆ ಯಾವುದೇ ಮಾಹಿತಿ ಇರಲಿಲ್ಲ. 1ನೇ ಆರೋಪಿ ಅತಿಕ್ರಮ ಪ್ರವೇಶ ಮಾಡಿರುವುದರ ಕುರಿತು ನೋಟೀಸನ್ನು ಜಾರಿ ಮಾಡಿರುತ್ತೇವೆ. 2ನೇ ಆರೋಗೆ ಸ್ಥಳವನ್ನು ಖುಲ್ಲಾಪಡಿಸಲು ನೋಟೀಸನ್ನು ನೀಡಿದ್ದೆನು. 1ನೇ ಆರೋಪಿ ವಸಂತ್‌ಶೆಟ್ಟಿಯವರ ಮಗ ಎಂದರೆ ಸರಿ. ಸದರಿ ವಸಂತ್‌ಶೆಟ್ಟಿಯವರು ಗ್ರಾಮ ಪಂಚಾಯಿತಿ ಸಧಸ್ಯರು ಆಗಿರುತ್ತಾರೆಂದರೆ ನನಗೆ ಗೊತ್ತಿಲ್ಲ, ಆದರೆ ಅವರು ರಾಜಕೀಯವಾಗಿ ಪ್ರಾಬಲ್ಯರಾಗಿದ್ದರು ಎಂದು ನನಗೆ ಗೊತ್ತು.

ದೂರುದಾರ ಚೆನ್ನಪ್ಪ 2005-06 ನೇ ಸಾಲಿನಲ್ಲಿ ಸದರಿ ಪಂಚಾಯಿತಿಯಲ್ಲಿ ಅಧ್ಯಕ್ಷನಾಗಿರುವುದರ ಕುರಿತು ನನಗೆ ಮಾಹಿತಿ ಇಲ್ಲ. ಸದರಿ ದೂರುದಾರ ಚೆನ್ನಪ್ಪನವರು ತನ್ನ ಅಧ್ಯಕ್ಷತೆಯ ಸಮಯದಲ್ಲಿ ಕೆಲವೊಂದು ನಿವೇಶನಗಳನ್ನು ಅಕ್ರಮವಾಗಿ ಅಸೆಸ್‌ಮೆಂಟ್ ಮಾಡಿಸಿಕೊಂಡು ಬಸವರಾಜಪ್ಪ ಎಂಬುವವರಿಗೆ ಮಾರಾಟಮಾಡಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ. 2ನೇ ಆರೋಪಿ ದೂರುದಾರ ಚೆನ್ನಪ್ಪನವರ ಅಕ್ರಮವನ್ನು ಪ್ರತಿಭಟಿಸಿ ಬಯಲಿಗೆಳೆದರು ಎಂಬ ವಿಷಯ ನನಗೆ ಗೊತ್ತಿಲ್ಲ. ಈ ಕಾರಣದಿಂದ ದೂರುದಾರ ಚೆನ್ನಪ್ಪ 2ನೇ ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತಾರೆಂಬ ವಿಷಯ ನನಗೆ ಗೊತ್ತಿಲ್ಲ. ಸದರಿ ಚೆನ್ನಪ್ಪನವರ ಅಕ್ರಮದ ಕುರಿತು ಸಭೆಯಲ್ಲಿಟ್ಟು ಪ್ರತಿಭಟಿಸಿದ್ದರ ಕುರಿತು ನನಗೆ ಮಾಹಿತಿ ಇಲ್ಲ. ಆ ಕಾರಣದಿಂದ ದೂರುದಾರ ಚೆನ್ನಪ್ಪ 2ನೇ ಆರೋಪಿಯ ಮೇಲೆ ಒತ್ತಡವನ್ನು

ಹೇರಿರುವ ಕುರಿತು ನನಗೆ ಮಾಹಿತಿ ಇಲ್ಲ. ದೂರುದಾರ ಚೆನ್ನಪ್ಪನ ನಡವಳಿಕೆಯ ಕುರಿತು ನನಗೆ 2ನೇ ಆರೋಪಿ ಮೌಖಿಕವಾಗಿ ಹೇಳಿದ್ದರು ಎಂದರೆ ಸರಿಯಲ್ಲ.

2ನೇ ಆರೋಪಿಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. 2ನೇ ಆರೋಪಿಯ ವಿರುದ್ಧ ನಾನು ಯಾವುದೇ ದೂರನ್ನು ನೀಡಿಲ್ಲ. 2ನೇ ಆರೋಪಿಯು ಯಾವುದೇ ರೀತಿಯ ತಪ್ಪನ್ನು ಎಸಗದಿದ್ದರೂ ಸಹ ಈ ಕೇಸಿನಲ್ಲಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಅಧ್ಯಕ್ಷರ ವಾಪ್ತಿಯಲ್ಲಿ ತಿದ್ದುಪಡಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದೂರುದಾರರ ಚೆನ್ನಪ್ಪನವರಿಗೆ ಸಂಬಂಧಿಸಿದ ಸ್ವತ್ತಿನ ಅಸೆಸ್‌ಮೆಂಟನ್ನು ಸೇರಿಸುವುದಿಲ್ಲವೆಂದು ಹೇಳಿದ ಕಾರಣದಿಂದ ಈ ದೂರನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಸ್ವತ್ತಿಗೆ ಸಂಬಂಧಿಸಿದ ಅಸೆಸ್‌ಮೆಂಟನ್ನು ನಮೂದಿಸಿರುವುದಲ್ಲಿ 2ನೇ ಆರೋಪಿಯ ಪಾತ್ರವಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಯಾವುದೇ ಅಕ್ರಮದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ದಾಖಲಾತಿಗಳಿಗೂ ಹಾಗೂ ಈ ಪ್ರಕರಣದ ದೂರಿಗೂ ಯಾವುದೇ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿ ಯಾವುದೇ ಆರೋಪವನ್ನು ಮಾಡದಿದ್ದರೂ ಕೂಡ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.